ಮೇಲೆದ್ದದ್ದೇ ಚಪ್ಪಾಳೆ ತಟ್ಟುತ್ತಿದ್ದ ಸಭೆಗೆ ಸಭೆಯೇ ಎಷ್ಟು ಗಪ್‌ಚಿಪ್ಪಾಯಿತೆಂದರೆ ಯಾರಾದರೂ ಸಣ್ಣಗೆ ಕೆಮ್ಮಿದ್ದರೂ ಕೂಡ ಅದೊಂದು ಮಹಾಪರಾಧವಾಗುತ್ತಿತ್ತೇನೋ. ನೆರೆದವರಲ್ಲಿ ನಾವೂ ಸೇರಿ ಎಲ್ಲರೂ ವಿದ್ಯುತ್ ಸಂಚಾರವಾದವರಂತೆ ಮೇಲೆದ್ದು, ಕುರ್ಚಿಗಳ ಮೇಲೆ ನಿಂತುಕೊಂಡು ಕೈಬೀಸುತ್ತಾ ಹೋ ಎಂದು ಕೂಗಿಕೊಂಡೆವು.

ಪೆಂಡಾಲಿನ ಹೊರಗೆ ಸ್ವಲ್ಪ ದೂರದಲ್ಲಿ ಪೊಲೀಸ್ ವ್ಯಾನು ನಿಲ್ಲಿಸಿಕೊಂಡು ಒಂದು ಮತ್ತಿ ಮರದ ಕೆಳಗೆ ಕೂತಿದ್ದ ಪೊಲೀಸರಿಗೆ ಸದ್ಯ ಒಂದು ಪರ್ವ ಮುಗಿಯಿತಲ್ಲ ಎಂದು ತುಸು ನಿರಾಳವಾಗಿತ್ತು. ಆದರೆ, ಮರದಿಂದ ಬಿಸಿಲು ಬೀಳದಿದ್ದರೂ ಉಸಿರುಕಟ್ಟಿಸುವಷ್ಟು ಧಗೆಯೋ ಧಗೆ. ಅವರ ಬಳಿಯಲ್ಲೇ ಮೈಚಾಚಿಕೊಂಡು ಮಲಗಿದ್ದ ನಾಯಿಗಳು ಇದ್ದಕ್ಕಿದ್ದ ಹಾಗೆ ಬೆಚ್ಚಿಬಿದ್ದಂತೆ ಎಚ್ಚರಗೊಂಡು ಅತ್ತಿತ್ತ ಮೂತಿಯನ್ನು ಆಡಿಸುತ್ತ ಮೂಗಿನ ಹೊಳ್ಳೆಗಳನ್ನು ಅರಳಿಸಿ ಅರಳಿಸಿ ಗಾಳಿಯನ್ನು ಮೂಸತೊಡಗಿದವು. ಕೆಲವೇ ಕ್ಷಣಗಳಲ್ಲಿ ಐನಾತಿ ವಾಸನೆಯೊಂದನ್ನು ಮೂಸಿದಂತೆ ಥಟ್ಟನೆ ಮೇಲೆದ್ದದ್ದೇ ಪೊಲೀಸರ ಕೈಗಳಲ್ಲಿದ್ದ ಸರಪಳಿಗಳನ್ನು ಒಮ್ಮೆಗೇ ಜಗ್ಗಿ ಎಳೆದ ರಭಸಕ್ಕೆ ಬಿಸಿಲಿನಿಂದ, ದಣಿವಿನಿಂದ ನಿದ್ದೆಗಣ್ಣಾಗಿದ್ದ ಪೊಲೀಸರ ಕೈಗಳು ಅವರಿಗೇ ಅರಿವಾಗದಂತೆ ಸಡಿಲವಾದುವು. ಕೂಡಲೇ ಎರಡೂ ನಾಯಿಗಳು ದುಡುದುಡುದುಡುದುಡು ಓಟಕಿತ್ತು ನಾವು ಕೂತಿದ್ದ ಕುರ್ಚಿಗಳ ನಡುವೆ ತೂರಿ, ವೇದಿಕೆಗೆ ಕರೆದೊಯ್ಯುವ ದಾರಿಯುದ್ದಕ್ಕೂ ಕಟ್ಟಿದ್ದ ಬಟ್ಟೆಯ ಕೆಳಗೆ ನುಸುಳಿ, ಹೂಕುಂಡಗಳನ್ನು ಉರುಳಿಸಿ, ಫೋಟೊಗ್ರಾಫರರತ್ತ ಹಾರಿ ಅವರು ಹೆದರಿಕೊಂಡು ದೂರ ಸರಿಯುವಂತೆ ಮಾಡಿ, ವೇದಿಕೆಯ ಮೇಲೆ ನೆಗೆದು ಅಲ್ಲಿ ಕೂತಿದ್ದ ಮುಖಂಡರೆಲ್ಲರೂ ಮೇಲೆದ್ದು ಏನಾಗುತ್ತಿದೆಯೆಂದು ತಿಳಿಯದೆ ದಿಗ್ಭ್ರಾಂತರಾಗುತ್ತಿರುವಾಗಲೇ ಇನ್ನೂ ತಮ್ಮ ಸಿಂಹಾಸನದಲ್ಲಿ ಕೂತು ನಮ್ಮೆಲ್ಲರ ಕಡೆ ಮಂದಹಾಸ ಬೀರುತ್ತಲೇ ಇದ್ದ ಭದ್ರಪ್ಪನವರ, ಅವರ ಪಕ್ಕದಲ್ಲೇ ಕೂತಿದ್ದ ನಾಗಯ್ಯನವರ ಬಳಿಗೆ ನುಗ್ಗಿ ಇಬ್ಬರೂ ಆರಾಮಾಗಿ ಕಾಲಾಡಿಸುತ್ತಿದ್ದರೆಂದು ಕೆರಳಿದಂತೆ ಬಾಯಿಹಾಕಿ ಅವರ ಪಂಚೆಯನ್ನು ಕಚ್ಚಿ ಎಳೆದವು.

ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆಯೆಂದು ಅನ್ನಿಸುತ್ತಿರುವಾಗಲೇ ಇದ್ದಕ್ಕಿದ್ದಂತೆ ವೇದಿಕೆಗೆ ನುಗ್ಗಿ ಬಂದ ನಾಯಿಗಳನ್ನು ನೋಡಿ ವೇದಿಕೆಯಲ್ಲಿದ್ದವರೆಲ್ಲರೂ ಮಂತ್ರಿಯವರ ಜೊತೆಗೇ ಕಂಗಾಲಾಗಿ ತಮ್ಮ ತಮ್ಮ ಕುರ್ಚಿಗಳಿಂದ ಮೇಲೆ ಹಾರಿದಾಗಲೇ ಕಪ್ಪು ಕನ್ನಡಕಗಳನ್ನು ಹಾಕಿಕೊಂಡು ಮಂತ್ರಿಗಳ ಹಿಂದೆಯೇ ನಿಂತಿದ್ದ ಇಬ್ಬರು ಸೆಕ್ಯೂರಿಟಿಯವರು ಕಣ್ಣು ಮಿಟುಕಿಸುವಷ್ಟರೊಳಗೆ ಕಿಸೆಯಲ್ಲಿದ್ದ ರಿವಾಲ್ವರುಗಳನ್ನು ಸೆಳೆದುಕೊಂಡು ಗುರಿಯಿಟ್ಟು ಏಕಕಾಲಕ್ಕೆ ಢಂ ಎನ್ನಿಸಿದ್ದೇ ಟೈಗರ್ ಥಂಡರ್ ಒಟ್ಟಿಗೇ ನೆಲಕ್ಕೊರಗಿದವು. ಥಂಡರ್‌ನ ಬಾಯಿಯಲ್ಲಿನ್ನೂ ಭದ್ರಪ್ಪನವರ ಪಂಚೆಯ ಚೂರೊಂದು ಉಳಿದುಬಿಟ್ಟಿತ್ತು.

ಸದಾ ನಗುನಗುತ್ತ ಲವಲವಿಕೆಯಿಂದಲೇ ಇರುತ್ತಿದ್ದ ಭದ್ರಪ್ಪನವರ ಮುಖದಲ್ಲಿ ಮೊಟ್ಟ ಮೊದಲ ಬಾರಿಗೆ ಅದೇನೋ ಭೀತಿಯನ್ನು ಗಮನಿಸಿದ ನಮಗೆ ಏನಾಯಿತೆಂದು ತಕ್ಷಣ ಗೊತ್ತಾಗದಿದ್ದರೂ ಏನೋ ಆಗಬಾರದ್ದು ಆಗಿರಬೇಕೆಂದು ಅನ್ನಿಸಿತು. ಅದುವರೆಗೂ ಎಲ್ಲಿದ್ದರೋ, ನೂರಾರು ಮಂದಿ ಪೊಲೀಸರು ವೇದಿಕೆಯತ್ತ ನುಗ್ಗಿದರು. ಅವರನ್ನು ಹಿಂಬಾಲಿಸಿತೇನೋ ಎನ್ನುವಂತೆ ತುಸು ದೂರದಲ್ಲಿ ಆಂಬುಲೆನ್ಸ್ ಸದ್ದುಮಾಡಿತು. ಪೆಂಡಾಲಿನಲ್ಲಿದ್ದವರೆಲ್ಲರೂ ಹೊರಗೋಡಲು ಜಾಗವಿಲ್ಲದೆ ಇದ್ದಲ್ಲೇ ಒದ್ದಾಡುತ್ತಾ, ಒಬ್ಬರ ಮೇಲೊಬ್ಬರು ಬೀಳುತ್ತಾ, ಹೆಂಗಸರು ಮಕ್ಕಳನ್ನು ನೆಲಕ್ಕೆ ದಬ್ಬಿ ತುಳಿಯುತ್ತಾ, ಪೆಂಡಾಲಿಗೆ ಪೆಂಡಾಲೇ ಕುಸಿದುಬಿದ್ದಿತೆನ್ನುವಂತೆ ಕಿರಿಚಿಕೊಳ್ಳುತ್ತಾ ಅಲ್ಲೋಲಕಲ್ಲೋಲವೆಬ್ಬಿಸುತ್ತಿದ್ದಾಗ ನಮಗೆ ಲಿಂಗಪ್ಪ ವೆಂಕಟಸ್ವಾಮಿ ಇಬ್ಬರೂ ತಮ್ಮ ತಮ್ಮ ಕೈಯಿಗಳಲ್ಲಿ ಹಸುಗೂಸನ್ನು ಎತ್ತಿಕೊಳ್ಳುವಂತೆ ಟೈಗರನ್ನೂ ಥಂಡರನ್ನೂ ಎತ್ತಿಕೊಂಡು ವೇದಿಕೆಯಿಂದ ಕೆಳಗಿಳಿಯುತ್ತಿದ್ದದ್ದು ಕಾಣಿಸಿತು. ಅದೇ ಹೊತ್ತಿಗೆ ವೇದಿಕೆಯಿಂದ ಹೇಗೋ ತಪ್ಪಿಸಿಕೊಂಡು ನೇರವಾಗಿ ನಮ್ಮೆಡೆಗೇ ಬಂದ ಉಪೇಂದ್ರ ತಾನೂ ಆ ನಾಯಿಗಳತ್ತ ಹಣೆಕ್ಕಿ ಛೆ ಛೆ ಎಂದದ್ದೇ ತಡ, ನಾವೆಲ್ಲರೂ ಅಳು ತಡೆಯಲಾಗದೆ ಗಳಗಳನೆ ಅತ್ತುಬಿಟ್ಟೆವು.

●